

‘ಮಹಾ ಎಡಬಿಡಂಗಿ’ ಚಿತ್ರದಲ್ಲಿ ಕೆ.ಎಸ್.ಎಲ್. ಸ್ವಾಮಿ ಹಾಗೂ ಖುಷ್ಬೂ ಅವರೊಂದಿಗೆ ಎಸ್‌ಪಿಬಿ



ಅಭಿನಯ ಶಾರದೆ ಜಯಂತಿಯೊಂದಿಗೆ ಗಾನ ವಿಶಾರದ

ಸರಳ ವ್ಯಕ್ತಿ ಅವರು. ನನಗೆ ಮೊದಮೊದಲ ರೆಕಾರ್ಡಿಂಗ್‌ನಲ್ಲಿ ಯಾವ ಯಾವ ಹಾಡುಗಳನ್ನು ಹೇಗೆ ಹಾಡಬೇಕು, ಯಾವ ಸಾಲಿಗೆ ಎಂಥ ಭಾವಾಭಿವ್ಯಕ್ತಿ ಮಾಡಬೇಕು ಎಂಬುದನ್ನೆಲ್ಲ ಎಷ್ಟು ಚೆನ್ನಾಗಿ ತಿದ್ದುತ್ತಿದ್ದರು ಎಂದರೆ ನಮಗೆ ಗೊತ್ತೇ ಆಗುತ್ತಿರಲಿಲ್ಲ. ನಾವು ತಪ್ಪು ಮಾಡುತ್ತಿದ್ದೀವಿ ಎಂಬ ಭಾವವೇ ಮೂಡದ ಹಾಗೆ ನಮ್ಮ ತಪ್ಪುಗಳನ್ನು ತಿದ್ದುತ್ತಿದ್ದರು.

ಎಸ್‌ಪಿಬಿ ಅವರನ್ನು ಕಳೆದುಕೊಂಡ ನಮ್ಮ ಪೀಳಿಗೆಗೆ ತೀರಾ ಆಪ್ತರನ್ನು ಕಳೆದುಕೊಂಡ ಅನಾಥಭಾವ ಕಾಡುತ್ತಿದೆ. ಯಾಕೆಂದರೆ ನಾವು ಅವರ ಹಾಡುಗಳ ಜೊತೆಗೆ ಅತ್ತಿದ್ದೇವೆ; ಅವರ ಹಾಡುಗಳ ಜೊತೆಗೆ ನಕ್ಕಿದ್ದೇವೆ; ಅವರ ಹಾಡುಗಳ ಜೊತೆಗೆ ಬದುಕಿದ್ದೇವೆ. ನಮ್ಮ ಮನಸ್ಸಿನ ಭಾವಗಳಿಗೆಲ್ಲ ಹಾಡಿನ ರೂಪ ಕೊಟ್ಟವರು ಅವರು. ಭಾಷೆಯ ಗಡಿಗಳನ್ನು ಮೀರಿ ನಾವು ಅವರ ಹಾಡುಗಳಿಂದ ತುಂಬಾ ಪಡೆದುಕೊಂಡಿದ್ದೇವೆ.

ಎಸ್‌ಪಿಬಿ ಅವರ ವ್ಯಕ್ತಿತ್ವದ ಕುರಿತು ಮಾತಾಡುವುದೆಂದರೆ, ಒಂದು ಪರ್ವತದ ಮುಂದೆ ನಿಂತು ಈ ಭಾಗ ಚೆನ್ನಾಗಿದೆ, ಅಲ್ಲಿ ಇರುವ ಹೂವು ಚೆನ್ನಾಗಿದೆ ಎಂದೆಲ್ಲ ವಿಶ್ಲೇಷಣೆ ಮಾಡಿದ ಹಾಗೆ. ನಾವು, ನಮ್ಮ ಕಣ್ಣಳತೆ ತುಂಬ ಚಿಕ್ಕದು. ಒಂದೇ ಮಾತಿನಲ್ಲಿ ಹೇಳಬೇಕು ಎಂದರೆ ಅವರು ಗಂಧರ್ವ. ಗಂಧರ್ವರಿಗೆ ಯಾರು ಏನು ಕಲಿಸಲು ಸಾಧ್ಯ ಹೇಳಿ? ಹೇಗೆ ಭೀಮಸೇನ ಜೋಷಿ, ಬಸವರಾಜ ರಾಜಗುರು ಅವರೆಲ್ಲ ಏಕಮೇವಾದ್ವಿತೀಯರೋ ಹಾಗೇ ಎಸ್‌ಪಿಬಿ ಅವರೂ ಒಬ್ಬರೇ.

ಸವಾಲನ್ನು ಸ್ವೀಕರಿಸಿ, ‘ಶಂಕರಾಭರಣಂ’ನಂಥ ಹಾಡುಗಳನ್ನು ಹಾಡುತ್ತಾರೆ. ಎಂಥ ಸವಾಲು ಅದು! ಅವರಿಗೆ ಆ ಶಕ್ತಿ ಇತ್ತು. ಅವರು ಶಾಸ್ತ್ರೀಯ ಸಂಗೀತ ಕಲಿತಿಲ್ಲ ಎಂದು ಯಾರಾದರೂ ಕಲಿಸಲು ಸಾಧ್ಯವೇ? ಸಂಗೀತದ ಎಲ್ಲ ಪ್ರಕಾರ, ರೂಪ, ಅಳತೆಗಳನ್ನೂ ಮೀರಿ ಬೆಳೆದವರು ಅವರು. ಯಾವ ಮಾಪನದಿಂದಲೂ ಅವರನ್ನು ಅಳೆಯಲು ಸಾಧ್ಯವಿಲ್ಲ. ಯಾಕೆಂದರೆ ಅವರು ಅವತಾರ ಪುರುಷ. ಅವರಿಗೆ ಯಾರೂ ಏನೂ ಹೇಳಿಕೊಡಲು ಸಾಧ್ಯವಿಲ್ಲ.

ಒಂದು ಜನವರಿ 26ರಂದು ಬೆಳಿಗ್ಗೆ ಆರೂಮುಕ್ಕಾಲಿಗೆ ನನಗೊಂದು ಫೋನ್ ಬಂತು. ‘ಹಲೋ, ಅಮ್ಮಾ, ನಾನು ಬಾಲಸುಬ್ರಹ್ಮಣ್ಯಂ. ನಿನ್ನ ಎಬ್ಬಿಸಿ ಡಿಸ್ಟರ್ಬ್ ಮಾಡಿದ್ನಾ?’ ಕೇಳಿದ್ರು. ‘ಈಗ ತಾನೇ ದೂರದರ್ಶನದಲ್ಲಿ ನಿನ್ನ ‘ವಂದೇ ಮಾತರಂ’ ಕೇಳ್ದೆ. ಅದ್ಭುತವಾಗಿ ಹಾಡಿದೀಯಾ. ದೇವ್ರು ನಿನ್ನ ಚೆನ್ನಾಗಿಟ್ಟಿರ್ಲಿ ತಾಯಿ‘ ಅಂದರು. ಹಿಂದಿನ ಜನ್ಮದ ಪುಣ್ಯ ಇಲ್ಲದಿದ್ದರೆ ನನಗೆ ಈ ಭಾಗ್ಯ ಸಿಗುತ್ತಿತ್ತೆ?

ನಾವು ‘ಟ್ರಿಬ್ಯೂಟ್ ಟು ಮುಕೇಶ್’ ಎಂಬ ಒಂದು ಲೈವ್ ಕಾರ್ಯಕ್ರಮ ಮಾಡಿದ್ವಿ. ಮುಕೇಶ್ ಅವರ ಹಾಡುಗಳನ್ನು ನಾನು ಹಾಡಿದೆ. ಸುಮಾರು 40 ಜನ ವಾದ್ಯಗಾರರನ್ನು ಸೇರಿಸಿ ಮಾಡಿದ ವಿಶೇಷ ಕಾರ್ಯಕ್ರಮ ಅದು. ಅದಕ್ಕೆ ಎಸ್‌ಪಿಬಿ ಅವರನ್ನು ಅತಿಥಿಯನ್ನಾಗಿ ಕರೆಯಬೇಕು ಎಂದು ಒಂದು ತಿಂಗಳ ಮುಂಚೆ ಹೋದೆವು. ಅವರು ಅದೇ ದಿನಾಂಕದಂದು ಬೇರೆ ಕಾರ್ಯಕ್ರಮ ಒಪ್ಪಿಕೊಂಡುಬಿಟ್ಟಿದ್ದರು. ‘ಸ್ವಲ್ಪ ಮೊದಲು ಸಂಪರ್ಕಿಸಿದ್ದರೆ ಬೇರೆ ಕಾರ್ಯಕ್ರಮ ಒಪ್ಪಿಕೊಳ್ಳುತ್ತಲೇ ಇರಲಿಲ್ಲ. ಇನ್ನು ಎರಡು ವಾರ ಬಿಟ್ಟು ಬೆಂಗಳೂರಿಗೆ ಬರ್ತಿದ್ದೇನೆ. ಅಲ್ಲಿ ಕ್ಯಾಮೆರಾ ತಗೊಂಡು ಬಾ. ಅಲ್ಲಿ ಮಾತಾಡ್ತೀನಿ. ಅದನ್ನು ನೀನು ಸ್ಕ್ರೀನ್‌ನಲ್ಲಿ ಹಾಕಿಕೊಳ್ಳಬಹುದು ಎಂದರು. ನಾವು ಎರಡು ವಾರ ಬಿಟ್ಟು ಹೋಗಿ ಅವರನ್ನು ಭೇಟಿಯಾದೆವು. ಮುಕ್ಕಾಲು ಗಂಟೆ ಅದ್ಭುತವಾಗಿ ಮಾತಾಡಿದರು. ‘ನನ್ನ ಮಗಳು ಒಂದು ದೊಡ್ಡ ಸಾಹಸಕ್ಕೆ ಕೈ ಹಾಕಿದ್ದಾಳೆ. ನಿಮ್ಮ ಕೆಲಸ ಏನು ಅಂದ್ರೆ ಆಶೀರ್ವಾದ ಮಾಡುವುದು. ಕಾರ್ಯಕ್ರಮಕ್ಕೆ ಹೋಗಿ ಖುಷಿಪಡುವುದು’ ಹೀಗೆ ಶುರುವಾಗುತ್ತದೆ ಅವರ ಮಾತು.

ಕೊನೆಯವರೆಗೂ ಫೋನ್ ಮೂಲಕ ಸಂಪರ್ಕದಲ್ಲಿದ್ದೆವು. ನಾನು ಕೊನೆಗೆ ಅವರನ್ನು ಮುಖತಃ ಭೇಟಿಯಾಗಿದ್ದು ನವೆಂಬರ್‌ನಲ್ಲಿ. ಒಂದು ಮೀಟಿಂಗ್‌ನಲ್ಲಿ ಭೇಟಿಯಾಗಿದ್ದೆವು. ಹೊರಡುವಾಗ ತುಂಬ ಹುಡುಗರು ಅವರ ಜೊತೆ ಫೋಟೊ ತೆಗೆದುಕೊಳ್ಳಲು ಮುತ್ತಿಕೊಂಡಿದ್ದರು. ನಾನು ತುಸು ದೂರದಲ್ಲಿ ನಿಂತು ಅವರಿಗೆ ನಮಸ್ಕಾರ ಮಾಡಿ ಹೋಗಬೇಕು ಎಂದು ಕಾಯುತ್ತಿದ್ದೆ. ಅವರು ನನ್ನತ್ತ ನೋಡಿ ನಕ್ಕರು. ‘ಅಮ್ಮಾ, ತಲ್ಲಿ... ನೀನೂ ಫೋಟೊ ತೆಗೆಸ್ಕೊಳ್ಳಬೇಕೇನಮ್ಮಾ? ಡು ಯು ರಿಯಲಿ ನೀಡ್ ಅ ಫೋಟೊ ವಿದ್ ಮೀ? ಯು ಆರ್ ಆಲ್‌ವೇಸ್ ಇನ್ ಮೈ ಹಾರ್ಟ್. ನಮ್ಮ ಬಾಂಧವ್ಯ ಬೇರೆ ತಲ್ಲಿ’ ಎಂದರು.

ಹೌದು. ನಮ್ಮ ಬಾಂಧವ್ಯ ಬೇರೆ. ಆ ಬಾಂಧವ್ಯದ ಸವಿ ಯಾವಾಗಲೂ ನನ್ನ ಮನಸಲ್ಲಿ ಜೀವಂತವಾಗಿರುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**